**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ 144/2019**

ಪಿಡಬ್ಲ್ಯೂ: 3

ಸಿಡಬ್ಲ್ಯೂ: 3

ಹೆಸರು : ವಿಶ್ವನಾಥ ಮಾಲತೇಶ ಸುಣಗಾರ

ವಯಸ್ಸು : 30 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಬ್ಯಾಡಗಿ

ದಿನಾಂಕ : 02.06.2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

1) ದಿಃ 20.12.2018 ರಂದು ಬ್ಯಾಡಗಿ ಠಾಣೆ, ಪೋಲೀಸರು ಸದರಿ ಪ್ರಕರಣದಲ್ಲಿ ನನ್ನನ್ನು ಮತ್ತು ಚಾಸಾ-2 ರವರನ್ನು ಘಟನಾ ಸ್ಥಳದ ಪಂಚನಾಮೆಗೆ ಸಾಕ್ಷಿದಾರರಾಗುವಂತೆ ಬರಲು ತಿಳಿಸಿದ್ದರಿಂದ ನಾವು ಪಂಚನಾಮೆಗೆ ಸಾಕ್ಷಿದಾರರಾಗಿ ತೆರಳಿರುತ್ತೇವೆ. ಘಟನಾ ಸ್ಥಳದಲ್ಲಿ ಚಾಸಾ-1 ರವರು ಪೋಲೀಸರಿಗೆ ತನ್ನ ಅಂಗಡಿಯಲ್ಲಿ ಕಳುವು ಆದ ಬಗ್ಗೆ ಮಾಹಿತಿಯನ್ನು ನೀಡಿದ್ದು, ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಮಧ್ಯಾಹ್ನ 03-30 ರಿಂದ 04-30 ರ ವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ತಯಾರಿಸಿರುತ್ತಾರೆ. ಸದರಿ ಪಂಚನಾಮೆಯನ್ನು ತಯಾರಿಸುವ ಕಾಲಕ್ಕೆ ಘಟನಾ ಸ್ಥಳದ ಹಾತ್ ನಕಾಶೆ ಮತ್ತು ಭಾವಚಿತ್ರಗಳನ್ನು ತೆಗೆದಿರುತ್ತಾರೆ.

2) ಸದರಿ ಘಟನಾ ಸ್ಥಳದ ಪಂಚನಾಮೆ ಈಗಾಗಲೇ ನಿಪಿ-2 ಎಂದು ಗುರುತಿಸಲ್ಪಟ್ಟಿದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು, ಸಾಕ್ಷಿಯು ನಿಪಿ-3 ಕಚ್ಚಾ ನಕಾಶೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಭಾವಚಿತ್ರಗಳು ಈಗಾಗಲೇ ನಿಪಿ-4 ರಿಂದ ನಿಪಿ-9 ಎಂದು ಗುರುತಿಸಲ್ಪಟ್ಟಿದ್ದು,ಸಾಕ್ಷಿಯು ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-4 ನ್ನು ಪೋಲೀಸರು ಬರೆದು ನನಗೆ ಮತ್ತು ಚಾಸಾ-2 ರವರಿಗೆ ಓದಿ ಹೇಳಿರುತ್ತಾರೆ.

3) ಆರೋಪಿತರು ಕೃತ್ಯಕ್ಕೆ ಬಳಸಿದ ಕಬ್ಬಿಣದ ರಾಡುಗಳನ್ನು ಮತ್ತು ಸ್ಕ್ರೂಡ್ರೈವರನ್ನು ಹಾಗೂ ಬೀಗವನ್ನು ಪೋಲೀಸರು ಜಪ್ತುಪಡಿಸಿಕೊಂಡಿರುತ್ತಾರೆ. ಸದರಿ ಮು. ಮಾಗಳನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯು ಸದರಿ ಮು.ಮಾ-1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : 1 ಮತ್ತು 2 ನೇ ಆರೋಪಿ ಪರ ವಕೀಲರಿಂದ :**

1 ಮತ್ತು 2 ನೇ ಆರೋಪಿ ಪರ ವಕೀಲರು ಸಮಯವಕಾಶ ಕೋರಿದ್ದು, ಪಾಟೀ ಸವಾಲು

ಮುಂದೂಡಲಾಯಿತು.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/ –
ಜೆಎಂಎಫ್‌ಸಿ, ಬ್ಯಾಡಗಿ.

(ಮಾನ್ಯ ಎಪಿಪಿಯವರ ವಿನಂತಿ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದ ಮೇರೆಗೆ ಅನುಮತಿಯನ್ನು ನೀಡಲಾಯಿತು)